



ಹದಿವಯಸ್ಸು, ಯುವಕ ಯುವತಿಯರಿಗೆ ಥೈರಾಯ್ಡ್ ಸಮಸ್ಯೆ ಬಂದು ಸರ್ಜರಿ ಮಾಡಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಗಾಗಿ ಮಾಡುವ ಗಾಯದಿಂದ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ ಎಂಬ ಭೀತಿಯನ್ನು ಈ ವಿನೂತನ ಸರ್ಜರಿ ದೂರ ಮಾಡಿದೆ.

**-ಡಾ. ಶ್ರೇಯಾಂಸ,**
ಎಂಡೊಕ್ರೈನ್ & ಆಂಕೋಪ್ಲಾಸ್ಟಿಕ್ ಸರ್ಜನ್

## ಥೈರಾಯ್ಡ್ ಗ್ರಂಥಿಯ ಕಾರ್ಯ

ಗಂಟಲಿನ ಭಾಗದಲ್ಲಿ ಚಿಟ್ಟೆಯ ಆಕಾರದಲ್ಲಿರುವ ಥೈರಾಯ್ಡ್ ಗ್ರಂಥಿ ನಮ್ಮ ದೇಹದ ಎಲ್ಲ ಕ್ರಿಯೆಗಳಿಗೆ ಅವಶ್ಯವಾದ ಅತಿ ಮುಖ್ಯ ಗ್ರಂಥಿ. ಇದು ಪಿಟ್ಯುಟರಿ ಗ್ರಂಥಿಯ ಅಧೀನದಲ್ಲಿರುತ್ತದೆ. ಇದು ಥೈರಾಕ್ಸಿನ್ ಎಂಬ ಹಾರ್ಮೋನ್ ಸ್ರವಿಸುತ್ತದೆ. ಥೈರಾಯ್ಡ್ ಗ್ರಂಥಿಯ ತೊಂದರೆ ಇದ್ದರೆ ಅದು ಶಾರೀರಿಕ ಮತ್ತು ಮಾನಸಿಕ ಚಟುವಟಿಕೆಗಳಿಗೆ ಅಡ್ಡಿಪಡಿಸುತ್ತದೆ. ಥೈರಾಯ್ಡ್ ಗ್ರಂಥಿ ಸ್ರವಿಸುವ ರಸದೂತಗಳು ದೇಹದ ಚಯಾಪಚಯ ಕ್ರಿಯೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುತ್ತವೆ. ಹೀಗಾಗಿ ಥೈರಾಯ್ಡ್ ಸಮಸ್ಯೆ ಇದ್ದರೆ ನಿರ್ಲಕ್ಷ್ಯ ಮಾಡದೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕಾದುದು ಅನಿವಾರ್ಯ.

ಥೈರಾಯ್ಡ್ ಒಂದು ಸರ್ವೇಸಾಮಾನ್ಯವಾದ ಸಮಸ್ಯೆಯಾಗಿದ್ದು, ಭಾರತದಲ್ಲಿ ಬಹಳಷ್ಟು ಮಂದಿ ಇದರಿಂದ ಬಳಲುತ್ತಿದ್ದಾರೆ. ಭಾರತೀಯ ವೈದ್ಯಕೀಯ ಮಂಡಳಿ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಸುಮಾರು 4.2 ಕೋಟಿ ಮಂದಿ ಥೈರಾಯ್ಡ್ ಸಮಸ್ಯೆಯಿಂದ ಬಳಲುತ್ತಿದ್ದಾರೆ.

### ಥೈರಾಯ್ಡ್ ಸಮಸ್ಯೆಯ ಲಕ್ಷಣಗಳು

- ಹಾರ್ಮೋನಿನ ಉತ್ಪಾದನೆಯಲ್ಲಿ ಏರುಪೇರು
- ತೂಕ ಹೆಚ್ಚುವುದು
- ಕೂದಲು ಉದುರುವುದು
- ಗಂಟಲಿನ ಭಾಗದಲ್ಲಿ ಊತ
- ಮಹಿಳೆಯರಲ್ಲಿ ಫಲವಂತಿಕೆ ಸಮಸ್ಯೆ ಹಾಗೂ ಇದರಿಂದ ಮಕ್ಕಳಾಗದೇ ಇರಬಹುದು.
- ಹಸಿವೆ ಕಡಿಮೆಯಾಗುವುದು
- ಮಾನಸಿಕ ಖಿನ್ನತೆ ಹಾಗೂ ಕೀಳರಿಮೆ ಉಂಟಾಗುವುದು

### ಪತ್ತೆ ಹೇಗೆ?

ಥೈರಾಯ್ಡ್ ಸಮಸ್ಯೆಯನ್ನು ಈಗ ಬಹಳ ಸುಲಭವಾಗಿ ಪತ್ತೆ ಹಚ್ಚಬಹುದು. ಥೈರಾಯ್ಡ್ ಹಾರ್ಮೋನ್ ಪರೀಕ್ಷೆ, ಗ್ರಂಥಿಯನ್ನು ಸ್ಕ್ರೀನಿಂಗ್ ಮಾಡಿ ನೋಡಬಹುದು, ಮಧುಮೇಹ, ಏರುರಕ್ತದೊತ್ತಡಗಳಂತಹ ಸಮಸ್ಯೆ ಇದ್ದವರು ನಿಯಮಿತ ತಪಾಸಣೆಗೆಂದು ಹೋದಾಗ ಥೈರಾಯ್ಡ್ ಪರೀಕ್ಷೆ ಮಾಡಿಸಿಕೊಂಡಾಗ ಪತ್ತೆಯಾಗುತ್ತದೆ.

ಯುವಕನಿಗೆ 2015ರಲ್ಲೇ ಪ್ರಥಮ ಬಾರಿಗೆ ಅಮೆರಿಕದಲ್ಲಿ ಮಾಡಿ ಯಶಸ್ವಿಯಾಗಿತ್ತು ಎಂಬ ವಿಚಾರ 'ಇಂಟರ್‌ನ್ಯಾಷನಲ್ ಜರ್ನಲ್ ಆಫ್ ಸರ್ಜರಿ' ಎಂಬ ಇನ್‌ಹೌಸ್ ಮೆಡಿಕಲ್ ಜರ್ನಲ್‌ನಲ್ಲಿ ಪ್ರಕಟವಾಗಿತ್ತು.

ಎಂಡೊಸ್ಕೋಪಿಕ್ ಥೈರಾಯ್ಡೆಕ್ಟಮಿ ಒಂದು ಸರಳ, ಅನುಕೂಲಕರ ಹಾಗೂ ಕಾರ್ಯಸಾಧ್ಯವಾದ ಸರ್ಜರಿ ಎಂಬುದನ್ನು ಅಮೆರಿಕ ವೈದ್ಯಕೀಯ ಸಂಘಟನೆಯ ಶಸ್ತ್ರಚಿಕಿತ್ಸಕರು ಸಾಬೀತುಪಡಿಸಿದ್ದಾರೆ.

### ರೋಗಿಗಳು ವಹಿಸಬೇಕಾದ ಎಚ್ಚರಿಕೆಗಳೇನು?

ಈ ಶಸ್ತ್ರಚಿಕಿತ್ಸೆಗೆ ಒಳಗಾದವರು ಬಾಯಿಯ ಶುಚಿತ್ವವನ್ನು ಕಾಪಾಡಿಕೊಳ್ಳಲೇಬೇಕು. ಯಾವುದೇ ಆಹಾರ ಸೇವಿಸಿದ ನಂತರ ಸ್ವಚ್ಛವಾಗಿ ಬಾಯಿಯನ್ನು ಶುಭ್ರಗೊಳಿಸಿ, ಸೋಂಕು ತಗುಲದಂತೆ ಜಾಗ್ರತೆ ವಹಿಸಬೇಕು. ಆರಂಭದಲ್ಲಿ ಒಂದೆರಡು ದಿನ ದ್ರವಾಹಾರವನ್ನೇ ಸೇವಿಸಬೇಕು. ಬಳಿಕ ವೈದ್ಯರ ಸಲಹೆ ಮೇರೆಗೆ ಸಾಮಾನ್ಯ ಪಥ್ಯಾಹಾರ ತೆಗೆದುಕೊಳ್ಳಬಹುದು.

### ಕರ್ನಾಟಕಕ್ಕೆ ಹೊಸದು

ಈ ಶಸ್ತ್ರಚಿಕಿತ್ಸೆ ಕರ್ನಾಟಕದಲ್ಲಿ ಹೊಸದು. ಶಿವಮೊಗ್ಗದಲ್ಲಿ ಇದೇ ಮೊದಲ ಬಾರಿಗೆ ಮ್ಯಾಕ್ಸ್ ಆಸ್ಪತ್ರೆಯ ವೈದ್ಯರು ಈ ಸರ್ಜರಿಯನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ. ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಈ ಶಸ್ತ್ರಚಿಕಿತ್ಸೆಯನ್ನು ಬೆರಳೆಣಿಕೆಯಷ್ಟು ವೈದ್ಯರಷ್ಟೇ ಇದುವರೆಗೂ ಮಾಡಿದ್ದಾರೆ. ಭಾರತದಲ್ಲಿ ಎರಡು ಮೂರು ವರ್ಷಗಳಿಂದ ಈಚೆಗೆ ಈ ಸರ್ಜರಿ ಮಾಡಲಾಗುತ್ತಿದೆ. ಕೊರಿಯ, ಜಪಾನ್, ಯೂರೋಪ್ ದೇಶಗಳಲ್ಲಿ ಕಳೆದ ಐದು ವರ್ಷಗಳಿಂದ ಈ ಸರ್ಜರಿ ಚಾಲ್ತಿಯಲ್ಲಿದೆ.